# 'ಕೂಡುಕುಟುಂಬದಲ್ಲಿ ನಾವಿಬ್ಬರು ಗಂಡ–ಹೆಂಡತಿ

**ವೀಣಾ ಸುಂದರ್**
ಕಲರ್ಸ್ ಕನ್ನಡ 'ಬೃಂದಾವನ'ದ ದಾಕ್ಷಾಯಿಣಿ



◆ **ನೀವು ಬೆಳೆದಂತೆ ಸೀರಿಯಲ್–ಸಿನಿಮಾ ಕ್ಷೇತ್ರದಲ್ಲಿ ಆದ ಬದಲಾವಣೆ ಏನು?**

ನನ್ನ ನಟನೆಗೆ 31 ವರ್ಷ ಆಯಿತು. ದೂರದರ್ಶನದ ಮೂಲಕವೇ ಪ್ರವೇಶ ಮಾಡಿದೆ. ಆಗ ಸಣ್ಣಕಥೆ, ಕಿರುಚಿತ್ರಗಳು, 13 ಕಂತಿನ ಧಾರಾವಾಹಿಗಳು ವಾರಾಂತ್ಯದಲ್ಲಿ ಪ್ರಸಾರವಾಗುತ್ತಿದ್ದವು. ಈಗ ತಾಂತ್ರಿಕವಾಗಿ ಸಾಕಷ್ಟು ಬೆಳೆದಿದ್ದನ್ನು ಗುರುತಿಸಬಹುದು. ನಟನೆಯಲ್ಲೂ ಕೌಶಲ್ಯ ಮತ್ತು ತಂತ್ರಗಾರಿಕೆಯನ್ನು ರೂಢಿಸಿಕೊಳ್ಳಲು ಸಾಧ್ಯವಾಗಿದೆ. ಪ್ರತಿಭಾವಂತ ನಿರ್ದೇಶಕರ ಜೊತೆ ಕೆಲಸದಿಂದಲೇ ಕಲಿತಿದ್ದೇನೆ. ಅದೇ ನನ್ನ ಶಾಲೆ. ಮೇಕಪ್ ಆಗ ಗಾಢವಾಗಿ ಮಾಡಿಕೊಳ್ಳುತ್ತಿದ್ದೆವು. ತಾಂತ್ರಿಕ ಬೆಳವಣಿಗೆಯಿಂದ ಅಷ್ಟು ಈಗ ಬೇಕಾಗಿಲ್ಲ. ಸಹಜವಾಗಿ ಕಾಣುವಂತೆ ಬದಲಾವಣೆಯನ್ನು ಕಂಡುಕೊಂಡಿದ್ದೇವೆ. ಅದನ್ನು ರಿಯಾಲಿಸ್ಟಿಕ್, ಅಂಡರ್ ಪ್ಲೆ ಎಂದು ಕರಿಯುತ್ತಿದ್ದಾರೆ. ಶಿಸ್ತು ಕಡಿಮೆ ಆಗಿದೆ ಎಂದು ಅನ್ನಿಸುತ್ತದೆ. ಈ ಕಾಲದ ಮಹಿಮೆ ಅನ್ನಬಹುದೇನೋ ಈಗ ಹಣ ಹೆಚ್ಚು ಬರ್ತಿದೆ. ಬದ್ಧತೆ ಕಡಿಮೆ ಆಗಿದೆ. ಮತ್ತೊಂದು ಹೊಸ ಅವಕಾಶ ಸಿಕ್ಕರೆ ಒಂದು ಪಾತ್ರವನ್ನು ಸಲೀಸಾಗಿ ಬಿಡುತ್ತಾರೆ. ಸ್ಪರ್ಧೆ ಆ ಮಟ್ಟಕ್ಕೆ ಇಳಿದಿದೆ.

ಹಿಂದೆ ನಿರ್ದೇಶಕರು ಸಾಕಷ್ಟು ಓದಿಕೊಂಡಿರುತ್ತಿದ್ದರು. ಅಗತ್ಯ ಅನ್ನಿಸಿದರೆ ತಕ್ಷಣವೇ ಕಥೆ ಮತ್ತು ಸಂಭಾಷಣೆಯಲ್ಲಿ ಸುಧಾರಣೆ ಮಾಡುತ್ತಿದ್ದರು. ಈಗ ಸಂಭಾಷಣೆಕಾರರು ಏನಾದರೂ ತಪ್ಪು ಬರೆದಿದ್ದರೂ ಅದನ್ನು ಸರಿಪಡಿಸುವ ಕೆಲಸಕ್ಕೆ ಕೆಲನಿರ್ದೇಶಕರು ಹೋಗುವುದಿಲ್ಲ. ಈಗ ಎಲ್ಲ ಯಾಂತ್ರಿಕವಾಗಿ ಮಾಡುವುದು ಹೆಚ್ಚಾಗಿದೆ. ವೇಗದ ಬದುಕಿನಲ್ಲಿ ಅನುಭವಿಸುವ ಸಮಯ ಸಂಯಮ ಯಾರಿಗೂ ಇಲ್ಲ ಎಂದು ಅನ್ನಿಸುತ್ತದೆ. ಇನ್‌ಸ್ಟಾ, ಫೇಸ್‌ಬುಕ್ ರೀಲ್ಸ್‌ನಲ್ಲಿ ಹುಟ್ಟುವ ಕಲಾವಿದರು ಒಂದಿಷ್ಟು ಕಾಲ ಮೆರೆಯುತ್ತಿರುವುದನ್ನು ನಾವು ನೋಡಬಹುದು.

◆ **ನಿಮ್ಮ ಪಾತ್ರಗಳಲ್ಲಿ ಆದ ವಿಕಾಸದ ಬಗ್ಗೆ ಹೇಳುವುದಾದರೆ?**

ಮೊದಲ ಪಾತ್ರ ಮಾಡುವಾಗ ಓದುತ್ತಿದ್ದೆ. ಆಗಿನಿಂದ ಇಂದಿನ ತನಕ ಬ್ರೇಕ್ ತೆಗೆದುಕೊಳ್ಳದೆ ಪಾತ್ರವನ್ನು ನಿರ್ವಹಿಸಿದ್ದೇನೆ. ನಾನು ಬೆಳೆದಂತೆ ಪಾತ್ರಗಳೂ ಸಿಗ್ತಾ ಇವೆ. ವಯಸ್ಸಿಗೆ ತಕ್ಕಹಾಗೆ ಪಾತ್ರಗಳು ಸಿಕ್ಕವು. ತಂಗಿ ಪಾತ್ರದಿಂದ, ಟೈಟಲ್ ಪಾತ್ರಗಳು, ಪ್ರಧಾನ, ಅತ್ತಿಗೆ, ಅಕ್ಕದಿಂದ ತಾಯಿ ಪಾತ್ರಕ್ಕೆ ಬಂದಿದ್ದೇನೆ. ಮದುವೆ ಆಯಿತು. ಮಕ್ಕಳಾದವು ನನ್ನ ಜೀವನವೂ ಹಾಗೆ ಸಾಗಿತು. 'ಮಾಯಾಮೃಗ' ಮಾಡುವಾಗ ನಾಲ್ಕು ದಿನಗಳ ಬಾಣಂತಿ. ನನ್ನ ಮಗನೂ ಒಂದು ಪಾತ್ರ ಆಗಿದ್ದರಿಂದ ಅವನು ಹುಟ್ಟಿ ನಾಲ್ಕೇ ದಿನಕ್ಕೆ ಶೂಟಿಂಗ್‌ಗೆ ಹೋಗಿದ್ದೆ. ಮೆಟರ್ನಿಟಿ ಲೀವ್ ಎನ್ನುವುದೇ ನನಗೆ ಇರಲಿಲ್ಲ.

◆ **ನಿಮ್ಮ ಸಂಗಾತಿ ನಟ. ಅದರಿಂದ ನಿಮ್ಮ ವೃತ್ತಿಗೆ ಆದ ಅನುಕೂಲ, ಅನನುಕೂಲಗಳೇನು?**

ನಾವಿಬ್ಬರೂ ಒಂದೇ ಕ್ಷೇತ್ರದಲ್ಲಿ ಇರುವುದರಿಂದ ನಮ್ಮ ಕೆಲಸದ ಬಗ್ಗೆ ವಿವರ ನೀಡುವ ಅಗತ್ಯ ಇಬ್ಬರಿಗೂ ಇರಲಿಲ್ಲ. ನಮಗೆ ಸಮಯದ ಮಿತಿ ಇರಲ್ಲ. ಬೆಳಿಗ್ಗೆ 6 ಅಥವಾ 7ಕ್ಕೆ ಮನೆ ಬಿಟ್ಟರೆ ರಾತ್ರಿ 10ರ ನಂತರವೇ ಮನೆಗೆ ಮರಳುತ್ತೇವೆ. ಒಮ್ಮೆ ಮೇಕಪ್ ಹಾಕಿದರೆ ಪಾತ್ರವಾಗುತ್ತೇವೆ. ಮೇಕಪ್ ತೆಗೆದ ನಂತರ ನಾವು ಎಷ್ಟು ಬಳಲಿದ್ದೇವೆ ಎನ್ನುವುದು ಗೊತ್ತಾಗುತ್ತದೆ. ಮಾನಸಿಕವಾಗಿ ಬೇರೆ ಪಾತ್ರವೇ ಆಗುವುದು ಸಿಕ್ಕಾಪಟ್ಟೆ ಶ್ರಮ ಆಗುತ್ತದೆ. ಬೇರೆ ಬೇರೆ ವೃತ್ತಿಯಲ್ಲಿದ್ದರೆ ಇದನ್ನು ಹೇಳುವುದು ಕಷ್ಟ ಆಗಬಹುದು. ಪರಸ್ಪರರಲ್ಲಿ ನಂಬಿಕೆ ವಿಶ್ವಾಸ ಇರಬೇಕು. ಕಲಾವಿದರು ಏನೇ ಮಾಡಿದರೂ ದೊಡ್ಡ ಸುದ್ದಿಯಾಗುತ್ತದೆ. ಅದರಿಂದ ಹೊಗಳಿಕೆ ತೆಗಳಿಕೆಗಳು ಬರಬಹುದು. ಅದರ ಬಗ್ಗೆ ನಮಗೆ ಜವಾಬ್ದಾರಿ ಇರಬೇಕು.

ಇಬ್ಬರೂ ನಟರಾಗಿದ್ದರಿಂದ ಹಾಲಿಡೇಸ್ ಅಂತ ಪ್ಲಾನ್ ಮಾಡಲು ಆಗುವುದಿಲ್ಲ. ನಮ್ಮ ಸಮಯ ನಮ್ಮ ಕೈಯಲ್ಲಿ ಇರಲ್ಲ. ತುಂಬ ಅನಿಶ್ಚಿತ ಬದುಕು. ಕೆಲವೊಮ್ಮೆ ಕೆಲಸವೇ ಇರಲ್ಲ. ಕೋವಿಡ್ ಕಾಲ ತುಂಬ ಒದ್ದಾಡಿದ್ದೇವೆ. ಉಳಿತಾಯದಲ್ಲೇ ಜೀವನ ಮಾಡಿದ್ದೇವೆ. ವರ್ಕ್‌ಫ್ರಂ ಹೋಮ್ ಎಂಬ ಅವಕಾಶ ನಮಗಿಲ್ಲ. ಕೆಲವರು ತಮ್ಮ ವೃತ್ತಿಯನ್ನೇ ಬದಲಿಸಿಕೊಂಡರು. ನಾವು ಕೆಲಸಕ್ಕೆ ಮೊದಲ ಆದ್ಯತೆ ಕೊಡುತ್ತೇವೆ. ಒಂದೇ ಪ್ರಾಜೆಕ್ಟ್‌ನಲ್ಲಿ ನಾವಿಬ್ಬರೂ ಮೊದಲ ಬಾರಿಗೆ ಮಾಡುತ್ತಿದ್ದೇವೆ.

◆ **ದೊಡ್ಡ ಕುಟುಂಬದಲ್ಲಿ ದಾಕ್ಷಾಯಿಣಿಯ ಪಾತ್ರಕ್ಕೆ ಇರುವ ಮಹತ್ವ ಏನು?**

'ಬೃಂದಾವನ'ದಲ್ಲಿ ಸುಂದರ್, ನಾನು ಗಂಡ–ಹೆಂಡತಿ ಆಗಿದ್ದೇವೆ. ಇದು 36 ಸದಸ್ಯರಿರುವ ತುಂಬು ಕುಟುಂಬ. ಅಷ್ಟು ಜನರ ನಡುವೆ ನನ್ನನ್ನು ನಾನು ಹೇಗೆ ನಟಿಯಾಗಿ ಗುರುತಿಸಿಕೊಳ್ಳಬೇಕು ಎನ್ನುವುದು ಸವಾಲಿನ ವಿಷಯ. ಇದರಲ್ಲಿ ಪಾತ್ರವಾಗಿ ಕಳೆದು ಹೋಗುತ್ತೇನಾ ಎಂದು ಯೋಚಿಸಿದ್ದೆ. ಶುರುವಾದ ಮೇಲೆ ಈ ಪಾತ್ರದ ಆಳ ಅಗಲ ಅರ್ಥ ಆಯಿತು. ಒಂದು ದೃಶ್ಯದಲ್ಲಿ ಡೈಲಾಗ್ ಇಲ್ಲದಿದ್ದರೂ ರಿಯಾಕ್ಟ್ ಮಾಡಬೇಕಾಗುತ್ತದೆ. ಸುಮ್ಮನೆ ಇದ್ದರೂ ಅದನ್ನು ಕ್ಯಾಮೆರಾ ಸೆರೆ ಹಿಡಿಯುತ್ತದೆ. ಐದು ತಿಂಗಳ ಮಗುವಿನಿಂದ ಅಜ್ಜ–ಅಜ್ಜಿ ತನಕದ ಪಾತ್ರಗಳು ಈ ಧಾರಾವಾಹಿಯಲ್ಲಿ ಇವೆ. ಇಬ್ಬರು ಬಸುರಿಯರಿದ್ದರೆ, ಒಬ್ಬ ಬಾಣಂತಿ ಇದ್ದಾಳೆ. ಸಮಕಾಲೀನ ಸಂದರ್ಭದಲ್ಲಿ ಇಂತಹ ಕುಟುಂಬವನ್ನು ಯೋಚಿಸಲು ಸಾಧ್ಯವೇ ಇಲ್ಲ. ರಾಮ್‌ಜೀ ಇದನ್ನು ನಿರ್ದೇಶಿಸುತ್ತಿದ್ದಾರೆ.

■ **ರಾಘವೇಂದ್ರ ಕೆ.**